ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ,

ಉಪನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಾಸಿಪಾಳ್ಯ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು-02

ಸದರಿ ಶಿಕ್ಷಣ ಸಂಸ್ಥೆಯನ್ನು ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ. ಕ್ರಮ ಸಂಖ್ಯೆ / ಪುಟ ಸಂಖ್ಯೆ / ವಾಲ್ಯೂಂ ಸಂಖ್ಯೆ : 01/2-3/17/2020

ದಿನಾಂಕ: 07-Sep-2020

ಮಂಜೂರಾತಿ ನೀಡಿದ ಕಛೇರಿ ವಿಳಾಸ:

[ನಿಯಮ 3 ಉಪನಿಯಮ 5(ಬಿ)

ಪ್ರಮಾಣ ಪತ್ರ ಸಂಖ್ಯೆ: 25411/2020-21

SMRTI ACADEMY ( SY. NO. 18, HUSKUR VILLAGE, ANEKAL TALUK, BANGALORE - 560099 )

ಆ9(ಅನು5) ಖಾ.ಪ್ರಾ.ಶಾ.ನೋಂ/11/2020-21

ಇವರ ಗೌವರ್ನಿಂಗ್ ಕೌನ್ಸಿಲ್ ಈ ಶಿಕ್ಷಣ ಸಂಸ್ಥೆಯ ಹೊಸ ಪ್ರಾಥಮಿಕ ಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1995] ಸಕ್ಷನ್ 31ರಂತೆ ಈ ಕೆಳಕಂಡ TO IMPROVE THE EDUCATION STANDARDS IN THE AREA, TO INCREASE THE LITERACY RATES OF GIRL CHILDREN IN T... ಪ್ರಾಥಮಿಕ (1 ರಿಂದ 5 / 1 ರಿಂದ 8) (Primary) ಪ್ರಾರಂಭಿಸಲು ಮಂಜೂರಾತಿ ನೀಡಿ ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಅರ್ಜಿ ಸಂಖ್ಯೆ : 201578
2. ಕ್ರಮ ಸಂಖ್ಯೆ : 25411
3. ಶಾಲೆಯ ಹೆಸರು ಮತ್ತು ವಿಳಾಸ : SMRTI ACADEMY ( SY. NO. 18, HUSKUR VILLAGE, ANEKAL TALUK, BANGALORE - 560099 )
4. ಅನುಮತಿ ನೀಡಿದ ತರಗತಿ : Primary (1 TO 8)
5. ಶೈಕ್ಷಣಿಕ ವರ್ಷ : 2020-21
6 ಅನುಮತಿ ನೀಡಿದ ಮಾಧ್ಯಮ : English

ಷರತ್ತುಗಳು

1. ಈ ನೋಂದಾವಣೆಯು ನಿಯಮ 3[5][4]ಕ್ಕೆ ಒಳಪಟ್ಟಿರುತ್ತದೆ.
2. ಗೌವರ್ನಿಂಗ್ ಕೌನ್ಸಿಲ್ ಇವರು ನಿಯಮ 4[4]ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
5. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:96] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
6. ಈ ಪ್ರೌಢಶಾಲಾ ನೊಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂ: ಇಡಿ:175:ಪಿಎಂಸಿ:95, ದಿ:07-09-1998 ಮತ್ತು ದಿ:29-12-1998ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10-00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.

ಮುಂದುವರೆದಿದೆ...

Scanned with CamScanner

9. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ ಹಾಜರಾತಿ 25 ಇರತಕ್ಕದ್ದು.

10. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36-39ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳ ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.

11. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

12. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

13. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

14. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಮೂರು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.

15. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

16. ಪ್ರಥಮ ಮಾನ್ಯತೆಗಾಗಿ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು. ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ: 30-09-2007ರ ಅನುಬಂಧ-3ರ ಚೆಕ್ ಲಿಸ್ಟ್ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ನೀಡುವುದು. ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.

17. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಶಾಲಾ ಆವರಣದ 100 ಗಜಗಳ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸಿದೆ ಎಂದು ಶಾಲಾ ಮುಂಭಾಗದಲ್ಲಿ ಪ್ರಕಟಣೆ ನೀಡುವುದು.

18. ಶಾಲಾ ಆಡಳಿತ ಮಂಡಳಿ ಯಾವುದೇ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ ನೋಂದಣಿಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿಕೊಂಡಿದೆ.

19. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿ.ಜಿ.ಸಿ 2014, ದಿನಾಂಕ: 11.11.2014ರಂತೆ ಮತ್ತು ಈ ಕಛೇರಿ ಸುತ್ತೋಲೆ ದಿನಾಂಕ: 14.11.2014ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

20. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿ.ಜಿ.ಸಿ 2017, ದಿನಾಂಕ: 07.03.2018ರಂತೆ ಮತ್ತು ಈ ಕಛೇರಿ ಸುತ್ತೋಲೆ ದಿನಾಂಕ: 26.03.2018ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ದಕ್ಷಿಣ ಜಿಲ್ಲೆ

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲೆ
ಕಲಾಸಿಪಾಳ್ಯ, ಬೆಂಗಳೂರು-560 002

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಆನೇಕಲ್ ತಾಲ್ಲೂಕು
2. ಕಾರ್ಯದರ್ಶಿಗಳು, SMRTI ACADEMY (SY. NO. 18, HUSKUR VILLAGE, ANEKAL TALUK, BANGALORE - 560099)
3. ಕಛೇರಿ ಪ್ರತಿ.

Scanned with CamScanner